# ನವಿಲುಗನ್ನಡಿ

- ಮಾರ್ಚ್ 'ಮಯೂರ'ದಲ್ಲಿ ಹೇಮಾ ಪಟ್ಟಣಶೆಟ್ಟಿ ಅವರು ಮಾಡಿರುವ ಪ್ರತಿಭಾ ರಾಯ್ ಅವರ ಸಂದರ್ಶನ ತುಂಬಾ ಮೌಲಿಕವಾಗಿದೆ. ಅವರ ಶೋಧಕ ಪ್ರಶ್ನೆಗಳಿಗೆ ರಾಯ್ ಅವರು ಅತ್ಯಂತ ಪ್ರಾಮಾಣಿಕ, ಮಾರ್ಮಿಕ ಉತ್ತರಗಳನ್ನು ಕೊಟ್ಟಿದ್ದಾರೆ. ನಿಜವಾದ ಅರ್ಥದಲ್ಲಿ ಪ್ರತಿಭಾ ರಾಯ್ ಒಳಬಂಡಾಯಗಾರ್ತಿ ಅನ್ನಿಸಿತು. ಅವರು ತಮ್ಮ ಜೀವನದಲ್ಲಿ ಯಶಸ್ವಿಯಾಗಿ ನಿರ್ವಹಿಸಿರುವ ವೈವಿಧ್ಯಮಯ ಪಾತ್ರಗಳು ಅವರ ಬಗ್ಗೆ ಅಪಾರ ಗೌರವ ಮೂಡಿಸಿದವು. ಸಂದರ್ಶನದಲ್ಲಿ ಹೇಮಾ ಅವರು ಬಳಸಿರುವ ಅಚ್ಚಗನ್ನಡದ ಸರಳ, ನೇರ ನುಡಿಗಟ್ಟುಗಳು ಸಂದರ್ಶನಕ್ಕೆ ಸ್ಪಷ್ಟತೆ, ನಿಖರತೆ ಕೊಟ್ಟಿವೆ.

**ಬಿ.ಆರ್. ಲಕ್ಷ್ಮಣರಾವ್, ಬೆಂಗಳೂರು**

- ಪ್ರತಿಭಾ ರಾಯ್ ಒಬ್ಬ ಹೆಮ್ಮೆಯ ಲೇಖಕರು. ಅವರ ಭಾಷಾ ಬಳಕೆ ಮತ್ತು ವಾಸ್ತವ ವಿಚಾರಗಳ ಗ್ರಹಿಕೆಗಳೆರಡೂ ಅದನ್ನು ಪುಷ್ಟೀಕರಿಸುತ್ತವೆ. ಇಬ್ಬರು ಮಹಾನ್ ಲೇಖಕಿಯರು ನಡೆಸಿದ ಈ ಮಾತುಕತೆಯಲ್ಲಿ ಸಾಹಿತ್ಯ ದರ್ಶನ, ಜೀವನ ದರ್ಶನದ ಆಯಾಮಗಳು ಹುದುಗಿದ್ದು ಒಂದೊಳ್ಳೆ ಪ್ರಬಂಧದ ಸವಿ ಒದಗಿಸಿತು.

**ಡಾ.ಬಿ. ಗಣಪತಿ ಉತ್ತುಂಗ, ತೀರ್ಥಹಳ್ಳಿ**

**ಪ್ರೊ.ಕೆ.ಎಸ್. ಮಲ್ಲೇಶ್, ಮೈಸೂರು**

**ಶಿವಾನಂದ ಪರಸಣ್ಣವರ**

- ಟಿ.ಆರ್. ಉಷಾರಾಣಿ ಅವರ 'ತೇಗದ ಮೇಜಿನ ಡ್ರೈರಿಯಿಂದ' ಕಥೆ ಮಾರ್ಚ್ ಮಯೂರದಲ್ಲಿ ಓದಿದೆ. ಮಾಮೂಲಿ ಕಥೆಗಳಿಗಿಂತ ಇದು ಭಿನ್ನವಾಗಿದ್ದು ದೀರ್ಘವಾಗಿದೆ. ಮೇಜಿಗೂ ಒಂದು ಆತ್ಮವಿದೆ ಅದಕ್ಕೂ ಭಾವನೆಗಳಿವೆ ಎಂಬುದನ್ನು ಕಥೆಗಾರ್ತಿ ಸೊಗಸಾಗಿ ನಿರೂಪಿಸಿದ್ದಾರೆ.

**ಎಂ.ಎಸ್. ನರಸಿಂಹಮೂರ್ತಿ, ಊರ್ಮಿಳಾ ಶರ್ಮ, ಜಿ.ವಿ. ಅರುಣ, ಬೆಂಗಳೂರು**

- ಎನ್.ಎಸ್. ಗುಂಡೂರ ಅವರ ಡಿ.ಆರ್. ನಾಗರಾಜ್ ಕುರಿತ ಲೇಖನ ಅವರ ಸಾಹಿತ್ಯ ಸಾಧನೆಗೆ ಕನ್ನಡಿ ಹಿಡಿದಂತಿದೆ. ಡಿ.ಆರ್. ಅವರ ವಿಸ್ತಾರವಾದ ಓದು, ಪಾಂಡಿತ್ಯಪೂರ್ಣ




ಬರವಣಿಗೆ ಕನ್ನಡ ವಿಮರ್ಶೆಯ ಹೊಸ ದಿಕ್ಕುಗಳನ್ನು ತೆರೆದಿಡಲು, ಹೊಸ ಆಯಾಮಗಳನ್ನು ಉದ್ದೀಪನಗೊಳಿಸಲು ಹೇಗೆ ಸಹಕಾರಿಯಾಯಿತು ಎಂಬುದನ್ನು ಲೇಖಕರು ಜ್ವಲಂತ ಉದಾಹರಣೆ ಸಮೇತ ಅನ್ವೇಷಿಸಿ ಬರೆದಿದ್ದಾರೆ.

**ಪ್ರೊ.ಎಂ.ಎಸ್. ರಘುನಾಥ್, ಬೆಂಗಳೂರು**

**ಸಲೀಂ ಸುಳ್ಯ, ಮಂಗಳೂರು ವಿ.ವಿ.**

- ರಟ್ಟಿಹಳ್ಳಿ ರಾಘವಾಂಕುರ ಅವರು ಕಥೆ ಪ್ರಸ್ತುತ ಪಡಿಸುವ ರೀತಿ ವಿಶಿಷ್ಟವಾಗಿದೆ. 'ಕಳಕೊಂಡವರು' ಮಾರ್ಮಿಕವಾದ ಕಥಾ ಹಂದರ.

**ರಾಜೇಂದ್ರ ಹೆಗಡೆ, ಹಾವೇರಿ**

- ಮಾರ್ಚ್ ಸಂಚಿಕೆಯಲ್ಲಿ ರೋಹಿಣಿ ಚಂದ್ರ ಅವರ ಕವಿತೆ ಸೊಗಸಾಗಿದೆ. ವಸ್ತುಸ್ಥಿತಿಯನ್ನು ಸಮರ್ಪಕವಾಗಿ ಚಿತ್ರಿಸಿದ್ದು, ಕವಿತೆಯಲ್ಲಿ ನೈಜತೆಯಿದೆ.

**ಕೆ.ಆರ್. ಜಯಲಕ್ಷ್ಮಿ, ಕಂಪಲಾಪುರ**

- ಮಾರ್ಚ್ ತಿಂಗಳ 'ಕಾಡಿಗೆ ಕಣ್ಣು' ಅಂಕಣ (ಕಲೀಂಉಲ್ಲಾ) ಮನಮುಟ್ಟುವಂತಿದೆ. ಪಕ್ಷಿ ವೀಕ್ಷಣೆಯಿಂದ ನೆಮ್ಮದಿ ಗಳಿಸುವುದು ಅರ್ಥ ಗರ್ಭಿತ.

**ಹುರುಕಡ್ಲಿ ಶಿವಕುಮಾರ, ಬಾಚಿಗೊಂಡನಹಳ್ಳಿ**

**ನಳಿನಿ ಮಾಗಲ್, ಸಕಲೇಶಪುರ**